# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **562** |
| ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09-03-2026 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೇಸಿಗೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನಿರಂತರ ವಿದ್ಯುತ್ ಸರಬರಾಜಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸ್ಥಾವರಗಳಿಗೆ ನಿರಂತರ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ:<br>• ನಗರ ಮತ್ತು ಕೈಗಾರಿಕಾ ಫೀಡರ್ ಗಳು: 24:00 ಗಂಟೆಗಳು.<br>• ನಿರಂತರ ಜ್ಯೋತಿ ಫೀಡರ್ ಗಳು: 23:00 ರಿಂದ 24:00 ಗಂಟೆಗಳು.<br>• ನೀರು ಸರಬರಾಜು ಫೀಡರ್ ಗಳು 24:00 ಗಂಟೆಗಳು.<br>ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನಿರಂತರ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಅಡಚಣೆ ಆಗದಂತೆ ನಿಯಮಿತವಾಗಿ ಎಲ್ಲಾ ವಿದ್ಯುತ್ ಉಪಕೇಂದ್ರ ಗಳ ಹಾಗೂ 11 ಕೆವಿ ವಿದ್ಯುತ್ ಮಾರ್ಗಗಳ ನಿರ್ವಹಣೆ ಕಾರ್ಯ ಮಾಡಲಾಗುತ್ತಿದೆ. |
| ಆ) | ರಾಜ್ಯದಲ್ಲಿರುವ ಟಿ.ಸಿ.ಗಳ ಸಂಖ್ಯೆ ಎಷ್ಟು, ಟಿ.ಸಿ.ಗಳ ಅಳವಡಿಕೆ ನಿರ್ವಹಣೆಗೆ ಹಾಗೂ ದುರಸ್ತಿಗಾಗಿ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು). | **ಟಿ.ಸಿ. (ಪರಿವರ್ತಕ) ಗಳ ಸಂಖ್ಯೆ:**<br>ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜನವರಿ-2026ರ ಅಂತ್ಯಕ್ಕೆ ಹಾಲಿ ಇರುವ ವಿತರಣಾ ಪರಿವರ್ತಕ ಕೇಂದ್ರಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br>**ಟಿ.ಸಿ (ಪರಿವರ್ತಕ) ಅಳವಡಿಕೆ:**<br>• ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಹಾಲಿ ಇರುವ ಪರಿವರ್ತಕಗಳು ಅಧಿಕ ವಿದ್ಯುತ್ ಹೊರೆಹೊಂದಿದ್ದಲ್ಲಿ ಹಾಗೂ ಹೊಸದಾಗಿ ವಿದ್ಯುತ್ ಸಂಪರ್ಕಕ್ಕಾಗಿ ಗ್ರಾಹಕರಿಂದ ಅರ್ಜಿಗಳು ಸಲ್ಲಿಕೆಯಾದಲ್ಲಿ ಬೇಡಿಕೆಗೆ ಅನುಗುಣವಾಗಿ ಸ್ಥಳ ಪರಿಶೀಲಿಸಿ ತಾಂತ್ರಿಕ ಸಾಧ್ಯತೆಯನುಸಾರ ಅವಶ್ಯವಿದ್ದಲ್ಲಿ ಆದ್ಯತೆ ಮೇರೆಗೆ ಹೊಸ ವಿತರಣಾ ಪರಿವರ್ತಕವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2025-26ನೇ ಸಾಲಿನಲ್ಲಿ ಜನವರಿ-26ರ ಅಂತ್ಯಕ್ಕೆ ಹೊಸದಾಗಿ ಅಳಡಿಸಲಾದ ಪರಿವರ್ತಕಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br>**ಟಿ.ಸಿ (ಪರಿವರ್ತಕ) ನಿರ್ವಹಣೆ/ ದುರಸ್ತಿ:**<br>• ESCOMs ಗಳಲ್ಲಿ ಚಾಲ್ತಿಯಲ್ಲಿರುವ ವಿತರಣಾ ಪರಿವರ್ತಕಗಳನ್ನು ಕಾಲಕಾಲಕ್ಕೆ ನಿರ್ವಹಣೆ ಮಾಡಲಾಗುತ್ತಿದೆ. |

| | | |
|---|---|---|
| | | • ಪರಿವರ್ತಕಗಳು ವಿಫಲಗೊಂಡಲ್ಲಿ ಕೆ.ಇ.ಆರ್.ಸಿ. ನಿಯಮಾವಳಿಯ ಮಾನದಂಡಗಳನ್ವಯ ಪರಿವರ್ತಕಗಳನ್ನು ಬದಲಾಯಿಸಲು ಕ್ರಮಕೈಗೊಳ್ಳಲಾಗುತ್ತಿದೆ. ವಿಫಲಗೊಂಡ ಪರಿವರ್ತಕಗಳನ್ನು ತ್ವರಿತಗತಿಯಲ್ಲಿ ದುರಸ್ತಿಗೊಳಿಸಲು ಒಟ್ಟಾರೆ 191 ಪರಿವರ್ತಕ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br>• ರಾಜ್ಯದಲ್ಲಿ ಪರಿವರ್ತಕಗಳ ದುರಸ್ತಿ ಕೇಂದ್ರಗಳ ಜಿಲ್ಲಾವಾರು ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು **ಅನುಬಂಧ- 3** ರಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ಬೇಡಿಕೆಗೆ ಅನುಗುಣವಾಗಿ ನಿಗಧಿತ ಕಾಲಾವಧಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ವಿತರಣೆ ಮಾಡಲು ಉಗ್ರಾಣದಲ್ಲಿ ಸಾಕಷ್ಟು ಪರಿವರ್ತಕಗಳ ದಾಸ್ತಾನು ಇರಿಸಲಾಗುತ್ತಿದ್ದು, ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ) | ವಿದ್ಯುತ್ ಸಮಸ್ಯೆ ಆಗದಂತೆ ವಿದ್ಯುತ್ ಜಾಲ ನಿರ್ವಹಣೆ ವಿದ್ಯುತ್ ಲೈನ್‌ಗಳ ಮೇಲ್ವರ್ಜೆ ಮತ್ತು ಪರಿವರ್ತಕಗಳ (ಟಿ.ಸಿ) ನಿರ್ವಹಣೆ ಆಗಬೇಕಾಗಿರುವುದರಿಂದ ಈ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಒದಗಿಸಲು ವಿದ್ಯುತ್ ಜಾಲ ಮತ್ತು ಪರಿವರ್ತಕಗಳ ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br>**ವಿದ್ಯುತ್ ಜಾಲ ನಿರ್ವಹಣೆ:**<br>ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಎಲ್ಲಾ 11 ಕೆವಿ ಮಾರ್ಗಗಳ ಸಂಪೂರ್ಣ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ:<br>• ವಿತರಣಾ ಜಾಲವನ್ನು ಸದಾ ಉತ್ತಮ ಸ್ಥಿತಿಯಲ್ಲಿ ಇರಿಸಲು ನಿರಂತರ ಮತ್ತು ವ್ಯವಸ್ಥಿತ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ (ತ್ರೈಮಾಸಿಕ (Quarterly), ಅರ್ಧವಾರ್ಷಿಕ (Half-Yearly), ವಾರ್ಷಿಕ (Annual) ಹಾಗೂ ಪೂರ್ವ-ಮಳೆಯ (Pre-Monsoon)).<br>• 11ಕೆ.ವಿ./ಎಲ್‌ಟಿ ಮಾರ್ಗಗಳಿಗೆ ತಗಲುವ ಮರದ ಕೊಂಬೆಗಳನ್ನು ಕತ್ತರಿಸುವುದು, ಜೋತು ಬಿದ್ದಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವುದು.<br>• ಬಾಗಿರುವ ವಿದ್ಯುತ್ ಕಂಬಗಳನ್ನು ಸರಿಪಡಿಸುವುದು, ಅವಶ್ಯವಿದ್ದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವುದು ಹಾಗೂ ಹಾಳಾಗಿರುವ ಹಳೇ ವಿದ್ಯುತ್ ಕಂಬಗಳನ್ನು ಬದಲಾಯಿಸುವುದು,<br>• GOS ಗಳ ನಿರ್ವಹಣೆ ಮಾಡುವುದು, ಹಾಗೂ 11 ಕೆವಿ/ಎಲ್ ಟಿ ಮಾರ್ಗಗಳಲ್ಲಿ ಹಾಳಾಗಿರುವ ವಿದ್ಯುತ್ ಜಂಪ್ ಗಳ ಬದಲಾವಣೆ ಮತ್ತು ಇನ್ನಿತರೆ ಅಗತ್ಯ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.<br>• 11 ಕೆವಿ ಲಿಂಕ್ ಲೈನ್‌ಗಳ ನಿರ್ಮಾಣ ಹಾಗೂ ಎಚ್‌ಟಿ/ಎಲ್‌ಟಿ ಮಾರ್ಗಗಳ ವಾಹಕ ಬದಲಾವಣೆ.<br>• ಬೆಸ್ಕಾಂ ವ್ಯಾಪ್ತಿಯಲ್ಲಿ Distribution Automation System (DAS) ಅಡಿಯಲ್ಲಿ ಸಕ್ರಿಯ RMU ಗಳನ್ನು ಅಳವಡಿಸುವುದರಿಂದ ರಿಮೋಟ್ ಮೂಲಕ ಈ RMU ಗಳ ಸಕ್ರಿಯ ಸ್ಥಿತಿಯನ್ನು ಮೇಲ್ವಿಚಾರಣೆ ನಡೆಸಿ ವ್ಯತ್ಯಯ ಕಂಡುಬಂದಿರುವ ಸಮಯದಲ್ಲಿ ತ್ವರಿತವಾಗಿ ಸರಿಪಡಿಸಲಾಗುತ್ತದೆ. |

ರಾಜ್ಯದಲ್ಲಿ 2025-26 ನೇ ಸಾಲಿನಲ್ಲಿ ಜನವರಿ-2026ರ ಅಂತ್ಯಕ್ಕೆ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವ್ಯವಸ್ಥೆ ಸುಧಾರಣೆಯಡಿಯಲ್ಲಿ ಹೆಚ್.ಟಿ/ಎಲ್.ಟಿ ಮಾರ್ಗದ ವಾಹಕ ಬದಲಾವಣೆ, ಹೆಚ್.ಟಿ/ಎಲ್.ಟಿ ಲಿಂಕ್ ಲೈನ್ ನಿರ್ಮಾಣ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ:

| **ಆರ್ಥಿಕ ವರ್ಷ 2025-26 (ಜನವರಿ-26ರ ವರೆಗೆ)** | **ಹೆಚ್.ಟಿ ಮಾರ್ಗದ ವಾಹಕ ಬದಲಾವಣೆ (ಕಿ.ಮೀ.)** | **ಎಲ್.ಟಿ ಮಾರ್ಗದ ವಾಹಕ ಬದಲಾವಣೆ (ಕಿ.ಮೀ.)** | **ಹೆಚ್.ಟಿ ಲಿಂಕ್ ಲೈನ್ (ಕಿ.ಮೀ.)** |
|---|---|---|---|
| **ಬೆಸ್ಕಾಂ** | 747.56 | 474.91 | 895.44 |
| **ಸೆಸ್ಕ್** | 626.35 | 560.30 | 902.63 |
| **ಮೆಸ್ಕಾಂ** | 319.65 | 1220.11 | 587.05 |
| **ಹೆಸ್ಕಾಂ** | 1219 | 800 | 950 |
| **ಜೆಸ್ಕಾಂ** | 259.93 | 182.30 | 671.00 |
| **ಒಟ್ಟು** | **3172.49** | **3237.62** | **4006.12** |

**<u>ಪರಿವರ್ತಕ ನಿರ್ವಹಣೆ:</u>**

ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹಾಲಿ ಅಳವಡಿಸಲಾದ ಪರಿವರ್ತಕ ಕೇಂದ್ರದ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ:

- ಪರಿವರ್ತಕದ ಗ್ರೌಂಡಿಂಗ್ ಪೈಪ್‌ಗಳಿಗೆ ಸಂಪರ್ಕ ಕಲ್ಪಿಸುವ ಜಿ.ಐ. ವೈರ್, ಲಗ್ಸ್ ಮತ್ತು ಬೋಲ್ಟ್-ನಟ್‌ಗಳನ್ನು ಬಿಗಿಗೊಳಿಸುವುದು ಹಾಗೂ ತುಕ್ಕು ಹಿಡಿದಿರುವ ಬೋಲ್ಟ್-ನಟ್‌ಗಳನ್ನು ಬದಲಾಯಿಸುವುದು.
- ಹಾಳಾಗಿರುವ contact ಗಳನ್ನು ಬದಲಾಯಿಸುವುದು, ಪರಿವರ್ತಕ ಕೇಂದ್ರಗಳ ಸುತ್ತ ಮುತ್ತ ಇರುವ ಗಿಡ, ಕಸ-ಕಡ್ಡಿ ಗಳನ್ನು ತೆರವುಗೊಳಿಸುವುದು, ಪರಿವರ್ತಕಗಳ ಹೆಚ್.ಟಿ./ಎಲ್.ಟಿ. ಮಾರ್ಗಗಳ ಜಂಪ್, ಬುಷಿಂಗ್‌ಗಳನ್ನು ಸರಿಪಡಿಸುವುದು.
- ಪರಿವರ್ತಕಗಳ ಹೆಚ್.ಟಿ/ಎಲ್.ಟಿ.ಗಳ ಸೂಕ್ತ ಸಾಮರ್ಥ್ಯದ ಫ್ಯೂಸ್ ಗಳನ್ನು ಅಳವಡಿಸುವುದು, ತೈಲ ಸೋರಿಕೆಯನ್ನು ತಡೆಗಟ್ಟುವುದು, ಭೂಸಂಪರ್ಕ ಸ್ಥಿತಿಯನ್ನು ಉತ್ತಮಗೊಳಿಸುವುದು.
- ಪರಿವರ್ತಕಗಳಲ್ಲಿ 3-ಫೇಸ್‌ಗಳ ಮೇಲೆ ಸಮಾನಾಂತರವಾಗಿ Load Balance ಮಾಡುವುದು ಹಾಗೂ ಪರಿವರ್ತಕಗಳ ಎಲ್.ಟಿ. ವೈರಿಂಗ್ ಕಿಟ್‌ಗಳನ್ನು ಹಂತಹಂತವಾಗಿ ಖರೀದಿಸಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ.
- ಅಧಿಕ ಭಾರ ಹೊಂದಿರುವ ಪರಿವರ್ತಕಗಳ ಬದಲಾಗಿ ಹೆಚ್ಚುವರಿ (Additional) ಪರಿವರ್ತಕಗಳ ಅಳವಡಿಕೆ .
- ಪರಿವರ್ತಕಗಳ ಬಲ ವರ್ಧನೆ (Enhancement).

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2025-26ನೇ ಸಾಲಿನಲ್ಲಿ ಜನವರಿ-2026ರ ಅಂತ್ಯಕ್ಕೆ ವ್ಯವಸ್ಥೆ ಸುಧಾರಣೆಯಡಿಯಲ್ಲಿ ಅಳವಡಿಸಲಾದ ಪರಿವರ್ತಕಗಳ ವಿವರಗಳು ಈ ಕೆಳಕಂಡಂತಿವೆ:

| **ಆರ್ಥಿಕ ವರ್ಷ** 2025-26 (ಜನವರಿ-26**ರ ವರೆಗೆ**) | **ವ್ಯವಸ್ಥೆ ಸುಧಾರಣೆಯಡಿ** ಅಳವಡಿಸಲಾದ **ಹೆಚ್ಚುವರಿ ಪರಿವರ್ತಕಗಳ ಸಂಖ್ಯೆ** |
|---|---|
| ಬೆಸ್ಕಾಂ | 951 |
| ಸೆಸ್ಕ್ | 525 |
| ಮೆಸ್ಕಾಂ | 975 |
| ಹೆಸ್ಕಾಂ | 154 |
| ಜೆಸ್ಕಾಂ | 685 |
| **ಒಟ್ಟು** | **3290** |

| | | |
|---|---|---|
| ಈ) | ಈಗಾಗಲೇ ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ವ್ಯತ್ಯಾಸ ಉಂಟಾಗಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸ್ಥಾವರಗಳಿಗೆ ನಿರಂತರ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ:<br>• ನಗರ ಮತ್ತು ಕೈಗಾರಿಕಾ ಫೀಡರ್ ಗಳು: 24:00 ಗಂಟೆಗಳು<br>• ನಿರಂತರ ಜ್ಯೋತಿ ಫೀಡರ್ ಗಳು : 23:00 ರಿಂದ 24:00 ಗಂಟೆಗಳು.<br>• ನೀರು ಸರಬರಾಜು ಫೀಡರ್ ಗಳು 24:00 ಗಂಟೆಗಳು.<br>ಮುಂದುವರೆದು, ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆಯಾಗುತಿದ್ದು ಯಾವುದೇ ಕೊರತೆಯಿರುವುದಿಲ್ಲ. ರಾಜ್ಯದಲ್ಲಿ ಉತ್ಪಾದನೆ ಘಟಕಗಳಿಂದ ಉತ್ಪಾದನೆಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ / ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್ ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತದೆ. |

ಸಂಖ್ಯೆ: ಎನರ್ಜಿ 56 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ: 562 ಕ್ಕೆ ಅನುಬಂಧ-1**

**ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜನವರಿ-2026ರ ಅಂತ್ಯಕ್ಕೆ ಇರುವ ಪರಿವರ್ತಕ ಕೇಂದ್ರಗಳ ಜಿಲ್ಲಾವಾರು ಸಂಖ್ಯೆಯ ವಿವರಗಳು:**

**ಬೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಬೆಂಗಳೂರು ನಗರ | 87120 |
| 2 | ರಾಮನಗರ | 65421 |
| 3 | ಬೆಂಗಳೂರು ಗ್ರಾಮಾಂತರ | 42422 |
| 4 | ಚಿಕ್ಕಬಳ್ಳಾಪುರ | 44338 |
| 5 | ಕೋಲಾರ | 41670 |
| 6 | ಚಿತ್ರದುರ್ಗ | 63912 |
| 7 | ದಾವಣಗೆರೆ | 74371 |
| 8 | ತುಮಕೂರು | 136901 |
| ಒಟ್ಟು | | **556155** |

**ಸೆಸ್ಕ್:**

| ಕ್ರ ಸಂ | ಜಿಲ್ಲೆ | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಮೈಸೂರು | 50466 |
| 2 | ಚಾಮರಾಜನಗರ | 29079 |
| 3 | ಕೊಡಗು | 8195 |
| 4 | ಮಂಡ್ಯ | 53112 |
| 5 | ಹಾಸನ | 54085 |
| ಒಟ್ಟು | | **194937** |

**ಹೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಧಾರವಾಡ | 20758 |
| 2 | ಗದಗ | 14864 |
| 3 | ಹಾವೇರಿ | 37905 |
| 4 | ಉತ್ತರ ಕನ್ನಡ | 15761 |
| 5 | ಬೆಳಗಾವಿ | 108524 |
| 6 | ವಿಜಯಪುರ | 77835 |
| 7 | ಬಾಗಲಕೋಟ | 62061 |
| ಒಟ್ಟು | | **337708** |

**ಮೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ದಕ್ಷಿಣ ಕನ್ನಡ | 29642 |
| 2 | ಉಡುಪಿ | 13787 |
| 3 | ಶಿವಮೊಗ್ಗ | 42091 |
| 4 | ಚಿಕ್ಕಮಗಳೂರು | 31308 |
| | **ಒಟ್ಟು** | **116828** |

**ಜೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| **1** | ಬೀದರ್ | 22472 |
| **2** | ಕಲಬುರಗಿ | 31680 |
| **3** | ಯಾದಗಿರಿ | 13612 |
| **4** | ರಾಯಚೂರ್ | 23957 |
| **5** | ಕೊಪ್ಪಳ | 23079 |
| **6** | ಬಳ್ಳಾರಿ | 15719 |
| **7** | ವಿಜಯನಗರ | 16214 |
| | **ಒಟ್ಟು** | **146733** |

**ಒಟ್ಟಾರೆ ಎಲ್ಲಾ ವಿಸಕಂಗಳು**

| ಕ್ರ. ಸಂ. | ಕಂಪನಿವಾರು | ಪರಿವರ್ತಕ ಕೇಂದ್ರಗಳ ಸಂಖ್ಯೆ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಬೆಸ್ಕಾಂ | 556155 |
| 2 | ಸೆಸ್ಕ್ | 194937 |
| 3 | ಹೆಸ್ಕಾಂ | 337708 |
| 4 | ಮೆಸ್ಕಾಂ | 116828 |
| 5 | ಜೆಸ್ಕಾಂ | 146733 |
| | **ಒಟ್ಟು** | **1352361** |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ: 562 ಕ್ಕೆ ಅನುಬಂಧ-2

**2025-26ನೇ ಸಾಲಿನಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜನವರಿ-26ರ ಅಂತ್ಯಕ್ಕೆ ಹೊಸದಾಗಿ ಅಳಡಿಸಲಾದ ಪರಿವರ್ತಕಗಳ ಸಂಖ್ಯೆಯ ಜಿಲ್ಲಾವಾರು ವಿವರಗಳು:**

**ಬೆಸ್ಕಾಂ**

| ಕ್ರ ಸಂ | ಜಿಲ್ಲೆ | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಬೆಂಗಳೂರು ನಗರ | 1539 |
| 2 | ರಾಮನಗರ | 1119 |
| 3 | ಬೆಂಗಳೂರು ಗ್ರಾಮಾಂತರ | 1365 |
| 4 | ಚಿಕ್ಕಬಳ್ಳಾಪುರ | 743 |
| 5 | ಕೋಲಾರ | 973 |
| 6 | ಚಿತ್ರದುರ್ಗ | 3361 |
| 7 | ದಾವಣಗೆರೆ | 8162 |
| 8 | ತುಮಕೂರು | 9110 |
| **ಒಟ್ಟು** | | **26372** |

**ಸೆಸ್ಕ್:**

| ಕ್ರ ಸಂ | ಜಿಲ್ಲೆ | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಮೈಸೂರು | 1093 |
| 2 | ಚಾಮರಾಜನಗರ | 831 |
| 3 | ಕೊಡಗು | 270 |
| 4 | ಮಂಡ್ಯ | 2552 |
| 5 | ಹಾಸನ | 1899 |
| **ಒಟ್ಟು** | | **6645** |

**ಹೆಸ್ಕಾಂ:**

| ಕ್ರ ಸಂ | ಜಿಲ್ಲೆ | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಧಾರವಾಡ | 519 |
| 2 | ಗದಗ | 441 |
| 3 | ಹಾವೇರಿ | 1959 |
| 4 | ಉತ್ತರ ಕನ್ನಡ | 213 |
| 5 | ಬೆಳಗಾವಿ | 3376 |
| 6 | ವಿಜಯಪುರ | 2292 |
| 7 | ಬಾಗಲಕೋಟ | 6020 |
| **ಒಟ್ಟು** | | **14820** |

**ಮೆಸ್ಕಾಂ:**

| ಕ್ರ ಸಂ | ಜಿಲ್ಲೆ | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ದಕ್ಷಿಣ ಕನ್ನಡ | 955 |
| 2 | ಉಡುಪಿ | 455 |
| 3 | ಶಿವಮೊಗ್ಗ | 1131 |
| 4 | ಚಿಕ್ಕಮಗಳೂರು | 1748 |
| | **ಒಟ್ಟು** | **4289** |

**ಜೆಸ್ಕಾಂ:**

| ಕ್ರ ಸಂ | ಜಿಲ್ಲೆ | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| **1** | ಬೀದರ್ | 508 |
| **2** | ಕಲಬುರಗಿ | 740 |
| **3** | ಯಾದಗಿರಿ | 263 |
| **4** | ರಾಯಚೂರ್ | 496 |
| **5** | ಕೊಪ್ಪಳ | 351 |
| **6** | ಬಳ್ಳಾರಿ | 186 |
| **7** | ವಿಜಯನಗರ | 401 |
| | **ಒಟ್ಟು** | **2945** |

**ಒಟ್ಟಾರೆ ಎಲ್ಲಾ ವಿಸಕಂಗಳು**

| ಕ್ರ. ಸಂ. | ಕಂಪನಿವಾರು | ಹೊಸದಾಗಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ 2025-26ನೇ ಸಾಲಿನಲ್ಲಿ (ಜನವರಿ-2026ರ ಅಂತ್ಯಕ್ಕೆ) |
|---|---|---|
| 1 | ಬೆಸ್ಕಾಂ | 26372 |
| 2 | ಸೆಸ್ಕ್ | 6645 |
| 3 | ಹೆಸ್ಕಾಂ | 14820 |
| 4 | ಮೆಸ್ಕಾಂ | 4289 |
| 5 | ಜೆಸ್ಕಾಂ | 2945 |
| | **ಒಟ್ಟು** | **55071** |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ: 562 ಕ್ಕೆ ಅನುಬಂಧ-3**

**ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆಯ ವಿವರಗಳು:**

**ಬೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| **1** | ಬೆಂಗಳೂರು ನಗರ | 7 |
| **2** | ರಾಮನಗರ | 4 |
| **3** | ಬೆಂಗಳೂರು ಗ್ರಾಮಾಂತರ | 3 |
| **4** | ಚಿಕ್ಕಬಳ್ಳಾಪುರ | 5 |
| **5** | ಕೋಲಾರ | 5 |
| **6** | ಚಿತ್ರದುರ್ಗ | 7 |
| **7** | ದಾವಣಗೆರೆ | 7 |
| **8** | ತುಮಕೂರು | 12 |
| **ಒಟ್ಟು** | | **50** |

**ಸೆಸ್ಕ್:**

| ಕ್ರ ಸಂ | ಜಿಲ್ಲೆ | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| 1 | ಮೈಸೂರು | 7 |
| 2 | ಚಾಮರಾಜನಗರ | 4 |
| 3 | ಕೊಡಗು | 1 |
| 4 | ಮಂಡ್ಯ | 7 |
| 5 | ಹಾಸನ | 8 |
| **ಒಟ್ಟು** | | **27** |

**ಹೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| **1** | ಧಾರವಾಡ | 3 |
| **2** | ಗದಗ | 4 |
| **3** | ಹಾವೇರಿ | 7 |
| 4 | ಉತ್ತರ ಕನ್ನಡ | 5 |
| 5 | ಬೆಳಗಾವಿ | 21 |
| 6 | ವಿಜಯಪುರ | 10 |
| 7 | ಬಾಗಲಕೋಟ | 9 |
| **ಒಟ್ಟು** | | **59** |

**ಮೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| 1 | ದಕ್ಷಿಣ ಕನ್ನಡ | 2 |
| 2 | ಉಡುಪಿ | 1 |
| 3 | ಶಿವಮೊಗ್ಗ | 8 |
| 4 | ಚಿಕ್ಕಮಗಳೂರು | 5 |
| | **ಒಟ್ಟು** | **16** |

**ಜೆಸ್ಕಾಂ:**

| ಕ್ರ ಸಂ | ಜಿಲ್ಲೆ | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| **1** | ಬೀದರ್ | 6 |
| **2** | ಕಲಬುರಗಿ | 12 |
| **3** | ಯಾದಗಿರಿ | 4 |
| **4** | ರಾಯಚೂರ್ | 6 |
| **5** | ಕೊಪ್ಪಳ | 4 |
| **6** | ಬಳ್ಳಾರಿ | 3 |
| **7** | ವಿಜಯನಗರ | 4 |
| | **ಒಟ್ಟು** | **39** |

ಒಟ್ಟಾರೆ ಎಲ್ಲಾ ವಿಸಕಂಗಳು

| ಕ್ರ. ಸಂ. | ಕಂಪನಿವಾರು | ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ |
|---|---|---|
| 1 | ಬೆಸ್ಕಾಂ | 50 |
| 2 | ಸೆಸ್ಕ್ | 27 |
| 3 | ಹೆಸ್ಕಾಂ | 59 |
| 4 | ಮೆಸ್ಕಾಂ | 16 |
| 5 | ಜೆಸ್ಕಾಂ | 39 |
| | **ಒಟ್ಟು** | **191** |